## 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ

## ಸಿ.ಸಿ.52/2022

| | | |
|---|---|---|
| ಹೆಸರು | ಎನ್. ಸತೀಶ್ ಕುಮಾರ್ | ಪ್ರಾ.ಸಾ.3 |
| ತಂದೆ/ಗಂಡನ ಹೆಸರು | ಎಂ.ನಾರಾಯಣಪ್ಪ | ಚಾ.ಸಾ.5 |
| ವಯಸ್ಸು | 56 ವರ್ಷ | |
| ಕೆಲಸ | ಬಿ.ಎಂ.ಟಿ.ಸಿ. ಸಹಾಯ ಸಂಚಾರ ನೀರೀಕ್ಷಕರು | ಸಾ.ಪ್ರ.ವ.ಬೋ |
| ಹಾಲಿ ವಾಸ | ಆರ್.ಟಿ.ನಗರ | 13.06.2025 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : -**

ನಾನು 2019 ರಿಂದ ಇಲ್ಲಿಯವರೆಗೆ ಬಿ.ಎಂ.ಟಿ.ಸಿ ಸಹಾಯಕ ಸಂಚಾರ ನೀರಿಕ್ಷಕರಾಗಿ ಕೇಂದ್ರ ಕಚೇರಿಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ಡಿಪೋ ನಂ.47 ಮಂಡೂರುಗೆ ಸೇರಿರುತ್ತದೆ. ಸದರಿ ಡಿಪೋ ನಂ.47 ರ ಘಟಕ ವ್ಯವಸ್ಥಾಪಕರು ನನಗೆ ಅಪಘಾತಕ್ಕೋಳಗಾದ ವಾಹನದ ಸಂಖ್ಯೆ:ಕೆ.ಎ.01-8762 ಬಿಡುಗಡೆಗೊಳಿಸಿಕೊಡಲು ತಿಳಿಸಿರುತ್ತಾರೆ. ನಾನು ಅದರ ಆಧಾರದ ಮೇಲೆ ಚಾಲಕ ನಿರ್ವಾಹಕರ ದಾಖಲಾತಿಗಳನ್ನು ಡಿಪೋ ನಂ.47 ಕ್ಕೆ ಹೋಗಿ ಪರಿಶೀಲಿಸಿ, ನಂತರ ತಿರುಮಲಶೆಟ್ಟಿಹಳ್ಳಿ ಪೋಲಿಸ್ ಠಾಣೆಗೆ ಹಾಜರಾಗಿ ದಾಖಲಾತಿಗಳನ್ನು ನೀಡಿ, ವಾಹನ ಸಂಖ್ಯೆ:ಕೆ.ಎ.01-8762 ಯನ್ನು ಬಿಡುಗಡೆಗೊಳಿಸಿಕೊಂಡಿರುತ್ತೇನೆ. ಪೋಲಿಸರು ನನಗೆ ನೋಟಿಸ್ ನ್ನು ನೀಡಿರುತ್ತಾರೆ. ನಾನು ಸದರಿ ನೋಟಿಸ್ ಗೆ ಉತ್ತರವನ್ನು ನೀಡಿ, ವಾಹನವನ್ನು ಬಿಡುಗಡೆಗೊಳಿಸಿಕೊಂಡಿರುತ್ತೇನೆ. ಆ ದಿನ ಆರೋಪಿ ಅಪಘಾತಕ್ಕೋಳಗಾದ ವಾಹನ ಸಂಖ್ಯೆ:ಕೆ.ಎ.01-8762 ಬಸ್ ಅನ್ನು ಚಲಾಯಿಸುತ್ತಿದ್ದರು. ನಾನು ಪರೀಕ್ಷಿಸಿದ ದಾಖಲಾತಿಗಳಿಂದ ಅದು ತಾಳೆ ಆಗುತ್ತಿತ್ತು.

ಸಾಕ್ಷಿಯು ನೋಟಿಸ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಕಾರಣ ನೋಟಿಸ್ ಅನ್ನು ನಿ.ಪಿ.3 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರತ್ಯುತ್ತರ ನೋಟಿಸ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಕಾರಣ ಪ್ರತ್ಯುತ್ತರ ನೋಟಿಸ್ ಅನ್ನು ನಿ.ಪಿ.4 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಇಂಡಿಮಿನಿಟಿ ಬಾಂಡ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಕಾರಣ ಇಂಡಿಮಿನಿಟಿ ಬಾಂಡ್ ಅನ್ನು ನಿ.ಪಿ.5 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ನನ್ನ ಮೇಲಾಧಿಕಾರಿಗಳು ನನಗೆ ವಾಹನ ಬಿಡುಗಡೆಗೊಳಿಸಿಕೊಳ್ಳಲು ಯಾವುದೇ ರೀತಿಯ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ನನಗೆ ಘಟನೆ ಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿ.ಪಿ.5 ರಲ್ಲಿ ಪ್ಯಾರಾ.2 ರಲ್ಲಿ ಪೋಲಿಸ್ ಠಾಣೆ ಮೊಕದಮ್ಮೆ 135/20 ಎಂದು ಇರುತ್ತದೆ. ಆ ರೀತಿ ಯಾವುದೇ ಪ್ರಕರಣ ಇರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಓ

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**

## 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ

## ಸಿ.ಸಿ.52/2022

| | | |
|---|---|---|
| ಹೆಸರು | ನಾರಾಯಣಸ್ವಾಮಿ ಕೆ.ವಿ | ಪ್ರಾ.ಸಾ.2 |
| ತಂದೆ/ಗಂಡನ ಹೆಸರು | ವೆಂಕಟನಾರಾಯಣಪ್ಪ | ಚಾ.ಸಾ.2 |
| ವಯಸ್ಸು | 42 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಕೇಶವಾರ, ಚಿಕ್ಕಬಳ್ಳಾಪುರ ತಾ. | 13.06.2025 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : -**

ದಿ:16.12.2021 ರಂದು ಸಂಜೆ 4:00 ರಿಂದ 5:00 ಗಂಟೆ ಸಮಯದಲ್ಲಿ ಘಟನಾ ಸ್ಥಳವಾದ ತಿರುಮಲಶೆಟ್ಟಿಹಳ್ಳಿ-ಸಮೇತನಹಳ್ಳಿ ರಸ್ತೆಯ ಮಧ್ಯೆ ಕೆ.ಎ.01-ಎಫ್-8762 ಬಿ.ಎಂ.ಟಿ.ಸಿ ಬಸ್ ಮತ್ತು ಕೆ.ಎ.40-ಇ.ಸಿ.503 ಹಿರೋ ಗ್ಲಾಮರ್ ದ್ವಿಚಕ್ರವಾಹನಗಳು ಡಿಕ್ಕಿ ಹೊಡೆದ ಕಾರಣ ಚಾ.ಸಾ.1 ರವರ ಬಲಗಾಲಿನ ಬಲತೊಡೆ ಮುರಿದು, ಅವರನ್ನು ಎಂ.ವಿ.ಜೆ ಆಸ್ಪತ್ರೆಯಲ್ಲಿ ದಾಖಲಿಸಿದ್ದರು. ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಸಮಯದಲ್ಲಿ ಮಹಜರು ಕ್ರಮ ಜರುಗಿಸಿ, ನಮ್ಮ ಸಹಿಯನ್ನು ಮಹಜರುಗೆ ಪಡೆದಿರುತ್ತಾರೆ. ಘಟನಾ ಸ್ಥಳದಲ್ಲಿ ಯಾವುದೇ ವಸ್ತುವನ್ನು ಅಮಾನತ್ತು ಮಾಡಿರುವುದಿಲ್ಲ. ಮಹಜರುಗೆ ನಾನು, ಚಾ.ಸಾ.3 ಮತ್ತು 4 ರವರು ಸಹಿ ಮಾಡಿರುತ್ತೇವೆ. ಪೋಲಿಸರು ಘಟನಾ ಸ್ಥಳವನ್ನು ನಮಗೆ ತೋರಿಸಿರುತ್ತಾರೆ. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ಸ್ಥಳ ಪಂಚನಾಮೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ರವರಿಂದ ಪಾಟೀ ಸವಾಲು: -**

ದಿ:16.12.2021 ರಲ್ಲಿ ಮಹಜರು ಕ್ರಮವನ್ನು ಜರುಗಿಸಿ, ನಮ್ಮ ಮುಂದೆ ಕೆ.ಎ.01-ಎಫ್-8762 ಬಿ.ಎಂ.ಟಿ.ಸಿ ಬಸ್ ಮತ್ತು ಕೆ.ಎ.40-ಇ.ಸಿ.503 ಹಿರೋ ಗ್ಲಾಮರ್ ದ್ವಿಚಕ್ರವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಪೋಲಿಸರಿಗೆ ಚಾ.ಸಾ.3 ಮತ್ತು 4 ರವರ ಸಮಕ್ಷಮ ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಪದವಿಯನ್ನು ಪೂರೈಸಿರುತ್ತೇನೆ. ನಾನು ಕೇಶವಾರ ಗ್ರಾಮದಲ್ಲಿ ವಾಸ ಮಾಡುತ್ತಿರುತ್ತೇನೆ. ನಾನು ನನ್ನ ವಿಳಾಸವನ್ನು ಕೇಶವಪುರ ಎಂದು ನೀಡಿರುವುದಿಲ್ಲ. ನಾನು ಘಟನೆಯನ್ನು ಖುದ್ದು ನೋಡಿರುವುದಿಲ್ಲ. ನಾನು ಘಟನೆ ಆದ ಸಮಯದಲ್ಲಿ ಕೇಶವಾರ ಗ್ರಾಮದಲ್ಲಿ ವಾಸವಾಗಿದ್ದೆ. ಚಾ.ಸಾ.1 ರವರು ನನಗೆ ಅಣ್ಣನ ಮಗ ಆಗಬೇಕು. ಚಾ.ಸಾ.1 ರವರಿಗೆ ತಂದೆ-ತಾಯಿ ಇರುತ್ತಾರೆ. ಚಾ.ಸಾ.1 ರವರ ತಂದೆ-ತಾಯಿ ಈ ಪ್ರಕರಣದಲ್ಲಿ ಹೇಳಿಕೆ ನೀಡಿರುವುದಿಲ್ಲ. ಚಾ.ಸಾ.1 ರವರು ಈ ಪ್ರಕರಣದ ಆಧಾರದ ಮೇಲೆ ಎಂ.ವಿ.ಸಿ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ. ಚಾ.ಸಾ.1 ರವರಿಗೆ ಅಪಘಾತ ವಾಗಿದೆ ಎಂದು ಚಾ.ಸಾ.1 ರವರ ತಂದೆ-ತಾಯಿ ದಿ:16.12.2021 ರ ಬೆಳಗ್ಗೆ 6:00 ಗಂಟೆಗೆ ನನಗೆ ತಿಳಿಸಿರುತ್ತಾರೆ. ಚಾ.ಸಾ.1 ರವರ ತಂದೆ-ತಾಯಿ ಅವರು ನನಗೆ ಖುದ್ದ ಬಂದು ಘಟನೆಯ ಬಗ್ಗೆ ತಿಳಿಸಿರುತ್ತಾರೆ. ವಿಷಯ ತಿಳಿದ ನಂತರ ಘಟನಾ ಸ್ಥಳಕ್ಕೆ ನಾನು, ಚಾ.ಸಾ.1 ರವರ ತಂದೆ-ತಾಯಿ, ಚಾ.ಸಾ.3 ಮತ್ತು 4 ರವರು ಹೋಗಿರುತ್ತೇವೆ. ಚಾ.ಸಾ.3 ಮತ್ತು 4 ರವರು ನಮ್ಮ ಊರಿನವರು. ಚಾ.ಸಾ.3 ಮತ್ತು 4 ರವರಿಗೂ ನಮಗೂ ಪರಿಚಯವಿರುತ್ತದೆ. ವಿಷಯ ತಿಳಿದ ನಂತರ ನಾವು ಮೂರು ಬೈಕ್ ನಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಎಲ್ಲರೂ ಬೈಕ್ ನಲ್ಲಿ ಮೊದಲು ಎಂ.ವಿ.ಜೆ ಆಸ್ಪತ್ರೆಗೆ ತೆರಳಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ಮಧ್ಯಾಹ್ನ 12:00 ಗಂಟೆಯವರೆಗೂ ಇದ್ದೆವು. ಮಧ್ಯಾಹ್ನ

12:00 ಗಂಟೆಯ ನಂತರ ನಮ್ಮ ಅಣ್ಣ-ಅತ್ತಿಗೆ ವಿಕ್ಟೋರಿಯಾ ಆಸ್ಪತ್ರೆಗೆ ಚಾ.ಸಾ.1 ರವನ್ನು ಕರೆದುಕೊಂಡು ಹೋಗಿರುತ್ತೇವೆ. ಮಹಜರುಲ್ಲಾಗಲೀ, ನನ್ನ ಹೇಳೀಕೆಯಲ್ಲಾಗಲೀ, ನಮ್ಮ ಅಣ್ಣ-ಅತ್ತಿಗೆ ಚಾ.ಸಾ.1 ರವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಬಗ್ಗೆ ಹೇಳಿರುವುದಿಲ್ಲ. ಘಟನಾ ಸ್ಥಳಕ್ಕೆ ಮಧ್ಯಾಹ್ನ 3:00 ಗಂಟೆ ಸಮಯಕ್ಕೆ ಹೋಗಿರುತ್ತೇವೆ. ಘಟನಾ ಸ್ಥಳಕ್ಕೆ ನಾವು ಪೋಲಿಸರನ್ನು ಕರೆದುಕೊಂಡು ಹೋಗಿರುತ್ತೇವೆ. ಘಟನಾ ದಿನಾಂಕದಲ್ಲಿ ಕೋವಿಡ್ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕೋವಿಡ್ ಇತ್ತು, ಅದು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದರಾ ಎಂದರೆ ಸರಿಯಲ್ಲ.

ಪೋಲಿಸರು ಮಹಜರುನ್ನು ಬರೆದಿರುತ್ತಾರೆ. ಯಾವ ಪೋಲಿಸರು ಮಹಜರು ಬರೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಮಹಜರುನಲ್ಲಿರುವ ವಿಷಯವನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಘಟನಾ ಸ್ಥಳ ಉತ್ತರ ಮತ್ತು ದಕ್ಷಿಣಾಧಿಯಲ್ಲಿ ಹಾದುಹೋಗುವಂತ ರಸ್ತೆ ಆಗಿರುತ್ತದೆ ಎಂದರೆ ಸರಿಯಲ್ಲ. ಉತ್ತರ ಮತ್ತು ದಕ್ಷಿಣಾಧಿಯಲ್ಲಿ ಹಾದುಹೋಗುವ ರಸ್ತೆಯ ಪೂರ್ವಕ್ಕೆ ಭವಾನಿ ವಿದ್ಯಾನಿಲಯ ಇರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಅಂಗಡಿಗಳು ಇರುತ್ತವೆ ಎಂದರೆ ಸರಿಯಲ್ಲ. ಉತ್ತರಕ್ಕೆ 100 ಮೀ. ಹೈವೇ ಇದ್ದು, ನಂತರ ತಿರುಮಲಶೆಟ್ಟಿಹಳ್ಳಿ ಸರ್ಕಲ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಸಮೇತನಹಳ್ಳಿಗೆ ಇರುವಂತಹ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಮಹಜರು ವಿಷಯ ಏನು ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಮ್ಮ ಮುಂದೆ ಯಾಗಲೀ, ಚಾ.ಸಾ.3 ಮತ್ತು 4 ಯಾಗಲೀ ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯನ್ನು ಘಟನಾ ಸ್ಥಳದಲ್ಲಿ ನೀಡಿರುತ್ತೇನೆ. ನಾನು ಘಟನಾ ಸ್ಥಳದಲ್ಲಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರಿಗೆ ಪರಿಹಾರ ಬರಬೇಕೆಂದು

ಅವರಿಗೆ ಸಹಾಯ ಮಾಡಲು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ನಿ.ಪಿ.2 ರಲ್ಲಿ ಠಾಣೆಯಲ್ಲೇ ಸೃಷ್ಟಿಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**